<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 07.12.2024</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ **6** ಪರವಾಗಿ ಶ್ರೀ. ಎಸ್. ಪಿ. ಆರ್.  ವಕೀಲರಿಂದಃ</u>

ನಾನು ವ್ಯವಸಾಯ ಮತ್ತು ವಕೀಲರ ವೃತ್ತಿ ಮಾಡುತ್ತೇನೆ. ನಾನು ವಕೀಲ ವೃತ್ತಿಯನ್ನು ಚಿಕ್ಕಬಳ್ಳಾಪುರದಲ್ಲಿ ಮಾಡುತ್ತೇನೆ. ನಾನು ಸಲ್ಲಿಸಿರುವ ವಾದ ಪತ್ರದ ವಿಚಾರಗಳು ತಿಳಿದಿರುತ್ತವೆ. ದಾವಾ ಆಸ್ತಿ ಸಂಖ್ಯೆ 1 ಸೊತ್ತು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಅಂದರೆ ತಾತನ ಕಡೆಯಿಂದ ಬಂದಿರುತ್ತದೆ. ನನ್ನ ತಾತನಿಂದ ನನ್ನ ತಂದೆಗೆ ವಿಲ್ ಮುಖಾಂತರ ಆ ಸೊತ್ತು ಬಂದಿದೆ. ನನ್ನ ತಂದೆಗೆ ಆ ಸೊತ್ತು ಸ್ವಯಾರ್ಜಿತ ಸೊತ್ತು ಎಂದರೆ ಸಾಕ್ಷಿ ಪಿತ್ರಾರ್ಜಿತ ಸೊತ್ತು ಎಂದು ನುಡಿಯುತ್ತಾರೆ. ಯಾವುದಾದರೂ ಸೊತ್ತು ವಿಲ್ ಮಖಾಂತರ ಬಂದಿದ್ದರೆ ಅದು ಸ್ವಯಾರ್ಜಿತ ಸೊತ್ತು ಆಗುತ್ತದೆ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ವಿಭಾಗ ಪತ್ರವಾಗಿರುತ್ತವೆ. ನನ್ನ ತಂದೆಗೆ ನಿಪಿ 1 ವಿಭಾಗದ ಪತ್ರದ ಮೂಲಕ ಈ ದಾವೆಯ  ಐಟಂ ನಂ. 1 ಸೊತ್ತು ಬಂದಿರುತ್ತದೆ ಎಂದರೆ ಸರಿ. ನಾನು ಹೇಳಿದ ವಿಲ್ ಪತ್ರ ಹಾಜರು ಮಾಡಿಲ್ಲ. ನನ್ನ ತಂದೆಗೆ ಯಾವುದೇ ರೀತಿಯ ವಿಲ್ ಪತ್ರ ದಾವಾ ಆಸ್ತಿ ಸಂಖ್ಯೆ1 ರ ಕುರಿತು ಆಗಿಲ್ಲ ಎಂದರೆ ಸರಿಯಲ್ಲ. ಸದರಿ ರವರಿಗೆ ನಿಪಿ 1 ರಂತೆ ಆ ದಾವಾ ಸೊತ್ತು ಬಂದಿರುತ್ತದೆ ಸರಿ. ಸಾಕ್ಷಿ ವಿಲ್ ಮತ್ತು ವಿಭಾಗ ಪತ್ರ ಎರಡರ ಮೂಲಕ  ಆ ಸೊತ್ತು ಬಂದಿದೆ ಎಂದು ನುಡಿಯುತ್ತಾರೆ. ವಿಲ್ ಪತ್ರದ ಕುರಿತು ಪ್ರೊ ಬೆಟ್ ಪಡೆದಿರುವುದಿಲ್ಲ. ನನ್ನ ತಂದೆಗೆ ಖಾತೆಯು ನಿಪಿ 1 ವಿಭಾಗ ಪತ್ರದ ಪ್ರಕಾರ ಆಗಿದೆ ಎಂದರೆ ಸರಿ. ನಿಪಿ 1 ರ ಪ್ರಕಾರ ನನ್ನ ತಂದೆಗೆ ಏನು ಖಾತೆ ಆಗಿರುತ್ತದೆ ಆ ಸೊತ್ತು ಅವರ ಸ್ವಯಾರ್ಜಿತ ಸೊತ್ತು ಎಂದರೆ ಸರಿಯಲ್ಲ. ವಿಲ್ ಪತ್ರದ ವಿಚಾರವನ್ನು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ.

ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ನಡುವೆ ಯಾವುದೇ ರೀತಿಯ ವಿಭಾಗವಾಗುವ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ಓ. ಎಸ್. ನಂ. 113/2014 ರ ದಾವೆಯಲ್ಲಿ ನಾನು ಕೂಡ ಪಕ್ಷಗಾರ ಎಂದರೆ ಸರಿ. ಅದರ ಎಲ್ಲಾ ವಿಚಾರಗಳು ನನಗೆ ಗೊತ್ತು ಎಂದರೆ ಸರಿ. ಓ. ಎಸ್. ನಂ. 113/2014 ರ ದಾವೆಯಲ್ಲಿ ನಾನು 4 ನೇ ಪ್ರತಿವಾದಿಯಾಗಿದ್ದೆ. ಅದರಲ್ಲಿ ನಾನು ಯಾವಾಗ ವಕಾಲತ್ತು ಸಲ್ಲಿಸಿ ಕೊಂಡಿರುತ್ತೇನೆ ಮತ್ತು ಯಾವಾಗ ಅದರ ವಿಚಾರಗಳನ್ನು ನೋಡಿ ತಿಳಿದುಕೊಂಡೆ ಎಂದರೆ ನೆನಪಿಲ್ಲ. ಆ ದಾವೆ ಸಲ್ಲಿಸಿದ ನಂತರ 6 ತಿಂಗಳ ಒಳಗೆ ನಾನು ಅದರ ವಿಚಾರಗಳು ಎಲ್ಲಾ ತಿಳಿದುಕೊಂಡಿರಬಹುದು ಎಂದು ನುಡಿಯುತ್ತಾರೆ.

ವಾದ ಪತ್ರದಲ್ಲಿ ಹೇಳಿರುವಂತೆ ನನ್ನ ತಂದೆ ಮತ್ತು 4 ನೇ ಪ್ರತಿವಾದಿ ಜಿ ಪಿ ಎ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಸಾಕ್ಷಿ ಮತ್ತೆ ಪ್ರತಿವಾದಿ 4 ಮಾತ್ರ ಆತನ ಪಾರ್ಟನರ್ಸ್ ಜೊತೆ ಸೇರಿ ಆ ದಾಖಲೆ ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ ಪಾರ್ಟನರ್ಸ್ ಹೆಸರು ಗೊತ್ತಿಲ್ಲ. ನನ್ನ ತಿಳುವಳಿಕೆ ಇಲ್ಲದಂತೆ ಆ ಜಿ ಪಿ ಎ ದಾಖಲೆಯನ್ನು ಮಾಡಿಕೊಂಡಿರುತ್ತಾರೆ. ನಾನು ಜಿ ಪಿ ಎ ದಾಖಲೆಯಲ್ಲಿ ಪಕ್ಷಗಾರವಾಗಿಲ್ಲ, ಆದರೆ ನನ್ನ ಬದಲಾಗಿ ಬೇರೆಯವರನ್ನು ತೋರಿಸಿ ಜಿ ಪಿ ಎ ದಾಖಲೆಯನ್ನು ಮಾಡಿಕೊಂಡಿದ್ದಾರೆ. ನಿಪಿ 4 ಜಿ ಪಿ ಎ ದಾಖಲೆಯನ್ನು ತೋರಿಸಿ ಅದರಲ್ಲಿ ಕಂಡುಬರುವ ಭಾವ ಚಿತ್ರ ಎಸ್ ವೆಂಕಟೇಶಪ್ಪ ರವರ ಅಂದರೆ ನನ್ನ ತಂದೆರವರು ಆಗಿದ್ದಾರೆ ಎಂದರೆ ಸರಿ. ಅವರ ಭಾವ ಚಿತ್ರದ ಮುಂಭಾಗ ಇರುವ ಸಹಿ ಕೂಡ ನನ್ನ ತಂದೆಯ ಸಹಿ ಆಗಿದೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ಅನುಸೂಯಮ್ಮ ಎಂಬುವವರು ನನ್ನ ತಾಯಿಯಾಗಿದ್ದಾರೆ, ಅವರ ಭಾವ ಚಿತ್ರ ಮತ್ತು ಸಹಿ

ನನ್ನ ತಾಯಿದಾಗಿದೆ. ಸಾಕ್ಷಿ ಆ ದಾಖಲೆಯಲ್ಲಿ ನನ್ನನ್ನು ಹೊರತು ಪಡಿಸಿ ನನ್ನ ಕುಟುಂಬದ ಎಲ್ಲಾ ಸದಸ್ಯರು ಇದ್ದಾರೆ ಮತ್ತು ಸಹಿ ಮಾಡಿದ್ದಾರೆ. ನನ್ನನ್ನು ಹೊರತು ಪಡಿಸಿ ಆ ದಾಖಲೆ ಮಾಡಲು ಕಾರಣ ಏನು ಎಂದರೆ ಸಾಕ್ಷಿ ನನಗೆ ಆ ದಾಖಲೆಯ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ದಾಖಲೆಯ ಮಾಹಿತಿ ಈ ದಾವೆ ಸಲ್ಲಿಸುವ ಮೊದಲು ತಿಳಿಯಿತು. ಅಂದರೆ 2015 ರಲ್ಲಿ ತಿಳಿಯಿತು. 2015 ರ ನಂತರ ನಾನು 2017 ರಲ್ಲಿ ಆ ಕುರಿತು ಈ ದಾವೆಯನ್ನು ಸಲ್ಲಿಸಿದ್ದೇನೆ. ನಾನು ಆ ದಾಖಲೆ ಕುರಿತು ನನ್ನ ಕುಟುಂಬದವರ ಮೇಲೆ ಮತ್ತು 4 ನೇ ಪ್ರತಿವಾದಿ ಮೇಲೆ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಲ್ಲ ನಾನು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲು ಠಾಣೆಗೆ ಹೋಗಿದ್ದೆ ಆದರೆ ಪ್ರಯೋಜನವಾಗಲಿಲ್ಲ. ಆ ನಂತರ ಈ ದಾವೆಯನ್ನು ಸಲ್ಲಿಸಿದ್ದೇನೆ. ನಾನು ಪಿ ಸಿ ಆರ್ ಪ್ರಕರಣವನ್ನು ದಾಖಲಿಸಲು ಪ್ರಯತ್ನ ಮಾಡಲಿಲ್ಲ. ನಿಪಿ 4 ರಲ್ಲಿ ನಾನು ಕೂಡ ಭಾಗಿಯಾಗಿ ಬರೆದುಕೊಟ್ಟಿದ್ದು ಮತ್ತು ಅದರ ಸತ್ಯಾಂಶ ತಿಳಿಯುತ್ತದೆ ಎಂದು ಆ ಕಾರಣದಿಂದ ನಾನು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲು ಹೋಗಿಲ್ಲ ಎಂದರೆ ಸರಿಯಲ್ಲ.

2009 ರಿಂದ 2010 ನೇ ಸಾಲಿನ ನನ್ನ, ತಂದೆ, ತಾಯಿ, ಸಹೋದರ ಸಹೋದರರಿಯರ ಮತ್ತು ನನ್ನ ಖಾತೆ ಪಟ್ಟಿ ಹಾಜರು ಮಾಡಲು ತೊಂದರೆ ಇಲ್ಲ. ನಾನು ಜಿ ಪಿ ಎ ದಾಖಲೆ ರದ್ಧತಿ ಕೇಳಲು ತೊಂದರೆ ಇತ್ತಾ ಎಂದರೆಸಾಕ್ಷಿ ಅದರಲ್ಲಿ ನನ್ನ ಚಿಕ್ಕಪ್ಪ ಮತ್ತು ನಮ್ಮ ಆಸ್ತಿಗಳು ಸೇರಿರುವುದರಿಂದ ರದ್ಧತಿ ಬಗ್ಗೆ ಕೇಳಲಿಲ್ಲ. ಆದರೆ ನಾನು ಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಈ ಕಾರಣವನ್ನು ವಾದಪತ್ರದಲ್ಲಿ ತಿಳಿಸಿದ್ದೀರಾ ಎಂದರೆ ಸಾಕ್ಷಿ ನಾನು ಭಾಗಂಶ ಬಗ್ಗೆ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಜಿ ಪಿ ಎ ದಾಖಲೆಯನ್ನು ನನ್ನನ್ನು ಹೊರತು ಪಡಿಸಿ ಕುಟುಂಬವರು ಮಾಡಿಕೊಟ್ಟಿದ್ದಾರೆ

ಎಂಬ ವಿಷಯವನ್ನು ನಾನು ಹೇಳಿಲ್ಲ. ನಾನು ಸೇರಿ ಜಿ ಪಿ ಎ ದಾಖಲೆಯನ್ನು ಮಾಡಿಕೊಟ್ಟಿದ್ದರು ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 62 ರ 4 ಎಕರೆ 10 ಗುಂಟೆ ಜಮೀನು ಸದಾಶಿವ ರೆಡ್ಡಿ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅದರ ಪತ್ರ ಹಾಜರು ಮಾಡಿಲ್ಲ ಹಾಜರು ಮಾಡಲು ತೊಂದರೆ ಇಲ್ಲ. ಅದರಲ್ಲಿ ನಾನು ಕೂಡ ಮಾರಾಟಗಾರನಾಗಿ ಇದ್ದೇನೆ, ಅದನ್ನು ಹಾಜರು ಮಾಡಿದರೆ ವಿಚಾರ ತಿಳಿಯುತ್ತದೆ ಎಂದು ನಾನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸಂಖ್ಯೆ 1 ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಆದ ಕಾರಣ ನಮ್ಮ ಹಸ್ತಕ್ಷೇಪ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕುಟುಂಬದ ಇತರೆ ಆಸ್ತಿಗಳನ್ನು ಹೊರತುಪಡಿಸಿ ಕೇವಲ ದಾವಾ ಆಸ್ತಿಗಳನ್ನು ಮಾತ್ರ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನನ್ನ ಮತ್ತು ನನ್ನ ತಂದೆ ಕುಟುಂಬದಲ್ಲಿ ದಾವಾ ಆಸ್ತಿ ಬಿಟ್ಟು ಬೇರೆ ಆಸ್ತಿ ಇಲ್ಲ.

ನಿಡಿ 2 ರಲ್ಲಿರುವ ದಾಖಲೆ ಬಗ್ಗೆ ಹೇಳಲು ಆಗುವುದಿಲ್ಲ. ನಿಡಿ 2 ಪ್ರಕಾರ ನನಗೆ ಒಟ್ಟು 60 ಲಕ್ಷ ಹಣ ಚೆಕ್ ಮತ್ತು ಡಿಡಿ ಮೂಲಕ ನೀಡಿದ್ದಾರೆ ಎಂದರೆ ಸಾಕ್ಷಿ ಅದನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ 2 ರಲ್ಲಿ ನನ್ನ ತಂದೆಯ, ತಾಯಿಯ ಮತ್ತು ಸಹೋದರಿಯರ ಸಹಿಗಳು ಇರುತ್ತವೆ, ಆದರೆ ನನ್ನ ಸಹಿ ಇರುವುದಿಲ್ಲ. ನನ್ನ ಚಿಕ್ಕಮ್ಮ ಮತ್ತು ಚಿಕ್ಕಪ್ಪ ರವರ ಸಹಿಗಳು ಕೂಡ ಇರುತ್ತವೆ. ನಿಡಿ 2 ರಲ್ಲಿ ಸಾಕ್ಷಿ ತನ್ನ ತಾಯಿ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ 2 (ಎ) ಎಂದು ಗುರುತಿಸಲಾಯಿತು. ಅದರಲ್ಲಿ ಸಹೋದರಿಯರ ಸಹಿಗಳನ್ನು ಗುರುತಿಸಿದ್ದು, ಅದನ್ನು ನಿಡಿ 2(ಬಿ) ಮತ್ತು ನಿಡಿ 2 (ಸಿ) ಎಂದು ಗುರುತಿಸಲಾಯಿತು. ನಿಡಿ 2 ರಲ್ಲಿ ಮತ್ತೆ ತನ್ನ ತಾಯಿ ಮತ್ತು ಸಹೋದರಿಯರ ಸಹಿಗಳನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 2 (ಡಿ), ನಿಡಿ 2

(ಇ) ಮತ್ತು (ಎಫ್) ಎಂದು ಗುರುತಿಸಲಾಯಿತು. ನಿತಿ 2 ರ ಪ್ರಕಾರ ನಮ್ಮ ಕುಟುಂಬಕ್ಕೆ ಮತ್ತು ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮನಿಗೆ ಸಂದಾಯವಾಗ ಬೇಕಾದ ಹಣ ಸೇರಿದೆ ಎಂದರೆ ಸರಿಯಲ್ಲ. ನಿಡಿ 2 ರಲ್ಲಿ 2 ನೇ ಪುಟದಲ್ಲಿ ದಿನಾಂಕ 13.03.2009 ಇದೆ ಎಂದರೆ ಸರಿ. ನಿಡಿ 1 ರಲ್ಲಿ ದಿ. 16-03-2009 ರಲ್ಲಿ ಮಾಡಿದ್ದಾರೆ ಎಂದರೆ ಸರಿ.

ನನ್ನ ದಾವೆಯು ಕಾಲಪರಿಮಿತಿ ದಾಟಿದೆ ಎಂದರೆ ಸರಿಯಲ್ಲ. ನಾನು ಸತ್ಯಾಂತ ಮರೆ ಮಾಚಿ ಅಕ್ರಮ ಲಾಭಕ್ಕಾಗಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾದಂ., ಶಿಡ್ಲಘಟ್ಟ.**